ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 305/2020

...................................................................

CW 17
PW 07

| | | |
|---|---|---|
| ಹೆಸರು | : | ಭರಮಪ್ಪ ಲೋಕಾಪುರ |
| ತಂದೆಯ ಹೆಸರು | : | ಸಿದ್ದಪ್ಪ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಡಿ ವಾಯ್ ಎಸ್ ಸಿ, ಐ ಜಿ ಪಿ ಕಚೇರಿ ಬೆಳಗಾವಿ |
| ವಾಸಸ್ಥಳ | : | ಬೆಳಗಾವಿ. |

ದಿನಾಂಕ 18-02-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ದಿನಾಂಕ 06-10-2018 ರಿಂದ ದಿನಾಂಕ 11-07-2020 ರ ವರಗೆ ಹಳಿಯಾಳ ಪೊಲೀಸ್ ವೃತ್ತ ಕಚೇರಿಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 24-01-2020 ರಂದು ಚಾಸಾ 15 ರವರಿಂದ ಕಡತವನ್ನು ಪಡೆದು ಪರಿಶೀಲನೆ ಮಾಡಿ, ಘಟನಾ ಜಾಗಕ್ಕೆ ಭೇಟಿ ನೀಡಿದಾಗ ಅಪಘಾತದಲ್ಲಿ ಮಂಜುನಾಥ ಮಿರಾಶಿ ಮತ್ತು ಶಿವಾಜಿ ಮಿರಾಶಿ ರವರು ಮರಣ ಹೊಂದಿದ್ದರು. ಕೂಡಲೇ ಅವರ ಭಾವಚಿತ್ರ ತೆಗೆದು ಚಾಸಾ 14 ರವರ ಮೂಲಕ ಹಳಿಯಾಳ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆನು. ಜಾಗದಲ್ಲಿದ್ದ ವಾಹನಗಳನ್ನು ರಸ್ತೆಯ ಪಕ್ಕದಲ್ಲಿ ನಿಲ್ಲಿಸಿ ಶಿವಾಜಿ ಮಿರಾಶಿ ರವರ ಶವ ಪಂಚನಾಮೆಯನ್ನು ಮಾಡಲು ಚಾಸಾ 16 ರವರಿಗೆ ಕೋರಿರುತ್ತೇನೆ. ನಂತರ ಮೃತ ಮಂಜುನಾಥ ಮಿರಾಶಿ ರವರ ಶವ ಪಂಚನಾಮೆಯನ್ನು ಮಾಡಲು ಚಾಸಾ 4 ಮತ್ತು 5 ರವರಿಗೆ ನೊಟೀಸ ನೀಡಿ ಹಳಿಯಾಳ ಸರ್ಕಾರಿ ಆಸ್ಪತ್ರೆಯಲ್ಲಿ ಶವ ಪಂಚನಾಮೆಯನ್ನು ಮಧ್ಯಾಹ್ನ 02-15 ರಿಂದ 03-45 ರ ವರೆಗೆ ಜರುಗಿಸಿರುತ್ತೇನೆ. ಆ ಸಮಯದಲ್ಲಿ ಭಾವಚಿತ್ರವನ್ನು ತೆಗೆದಿರುತ್ತೇನೆ. ಸದರಿ ಶವ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ10 ಬಿ** ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಭಾವಚಿತ್ರಗಳನ್ನು ಈಗಾಗಲೇ ನಿಪಿ 5 ಮತ್ತು 6 ಎಂದು ಗುರುತಿಸಲಾಗಿದೆ.

ನಂತರ ಚಾಸಾ 14 ಮತ್ತು ಎಸ್ ಎಮ್ ದುರ್ಗಪ್ಪ ಠಾಣಾ ಸಿಬ್ಬಂದಿ ರವರಿಗೆ ಪಿ ಎಮ್ ವರದಿ ಮಾಡಿಸಿ ವಾರಸುದಾರರಿಗೆ ಶವವನ್ನು ಬಿಟ್ಟುಕೊಡಲು ತಿಳಿಸಿರುತ್ತೇನೆ. ಅದರಂತೆ ಶವವನ್ನು ಬಿಟ್ಟು ವರದಿ ಮಾಡಿರುತ್ತಾರೆ.

ಚಾಸಾ 16 ರವರು ಶಿವಾಜಿ ರವರ ಶವ ಪಂಚನಾಮೆಯನ್ನು ಜರುಗಿಸಿ ವರದಿ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ನಂತರ ಅದೇ ದಿನ ಚಾಸಾ 2 ಮತ್ತು 3 ರವರಿಗೆ ನೊಟೀಸ ನೀಡಿ, ಘಟನಾ ಜಾಗದ ಪಂಚನಾಮೆಯನ್ನು ಸಂಜೆ 05–00 ರಿಂದ 06–00 ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 4 ಸಿ ಎಂದು** ಗುರುತಿಸಲಾಯಿತು. ಆ ಸಮಯದಲ್ಲಿ ಅಪಘಾತಕ್ಕೀಡಾದ ವಾಹನಗಳನ್ನು ತೆಡೆಹಿಡಿದಿರುತ್ತೇನೆ.

ಚಾಸಾ 6 ರಿಂದ 10 ರವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಅದೇ ದಿನ ಅಪಘಾತಕ್ಕೋಳಪಟ್ಟ ವಾಹನಗಳ ಯಾಂತ್ರಿಕ ಪರೀಕ್ಷೆ ಮಾಡಿಕೊಡಲು ಚಾಸಾ 12 ರ ವರಿಗೆ ಕೋರಿರುತ್ತೆನೆ.

ಅದೇ ದಿನ ಚಾಸಾ 14 ರವರು ನೀಡಿದ ಕಲಂ 65 ಬಿ ರಡಿಯಲ್ಲಿ ನೀಡಿದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ 12 ಎಂದು**, ಸಾಕ್ಷಿಯ ಸಹಿಯನ್ನು **ನಿಪಿ 12 ಎ ಎಂದು** ಗುರುತಿಸಲಾಯಿತು.

ದಿನಾಂಕ 26–01–2020 ರಂದು ತನಿಖೆಯನ್ನು ಮುಂದುವೆರೆಸಿ ಚಾಸಾ 11 ರವರಿಗೆ 133 ರಡಿಯಲ್ಲಿ ನೊಟೀಸ ಜಾರಿ ಮಾಡಿರುತ್ತೇನೆ. ಸದರಿ ನೊಟೀಸ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ 13 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 13 ಎ ಎಂದು** ಗುರುತಿಸಲಾಯಿತು. ಅದೇ ದಿನ ಅವರಿಂದ ಉತ್ತರ ಪಡೆದು, ಬಸ್ಸಿಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದಿರುತ್ತೇನೆ. ಸದರಿ ಉತ್ತರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ 14 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 14 ಎ ಎಂದು** ಗುರುತಿಸಲಾಯಿತು.

ಅದೇ ದಿನ ರಾಜು ಮೋಹನ ಮಿರಾಶಿ ರವರಿಗೆ 133 ರಡಿಯಲ್ಲಿ ನೊಟೀಸ ಜಾರಿ ಮಾಡಿರುತ್ತೇನೆ. ಸದರಿ ನೊಟೀಸ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ 15 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 15 ಎ ಎಂದು** ಗುರುತಿಸಲಾಯಿತು. ಅದೇ ದಿನ ಅವರಿಂದ ಉತ್ತರ ಪಡೆದು ಮೋಟಾರ ಸೈಕಲ್ ದಾಖಲೆಗಳನ್ನು ಪಡೆದಿರುತ್ತೇನೆ. ಸದರಿ ಉತ್ತರವನ್ನು ಸಾಕ್ಷಿ ನೋಡಿ

ಗುರುತಿಸಿದ್ದು ಅದನ್ನು **ನಿಪಿ 16 ಎಂದು**, ಸಾಕ್ಷಿಯ ಸಹಿಯನ್ನು **ನಿಪಿ 16 ಎ ಎಂದು** ಗುರುತಿಸಲಾಯಿತು.

ಪ್ರಕರಣದ ಆರೋಪಿಯು ಠಾಣೆಯಲ್ಲಿ ಹಾಜರಾಗಿದ್ದು ಆತನ ವಿಚಾರಣೆ ಮಾಡಿದಾಗ ಆತನು ಅಪಘಾತ ಮಾಡಿದ ಬಗ್ಗೆ ಒಪ್ಪಿಕೊಂಡಿದ್ದು, ಆತನ ದಸ್ತಗೀರ್ ಮಾಡಿ ನಿಯಮ ಪಾಲಿಸಿ ಬಿಡುಗಡೆ ಮಾಡಿರುತ್ತೇನೆ.

ನಂತರ ಚಾಸಾ 11 ರವರ ಹೇಳಿಕೆಯನ್ನು ಪಡೆದು ಅವರನ್ನು ಬಿಡುಗಡೆ ಮಾಡಿರುತ್ತೇನೆ.

ದಿನಾಂಕ 30-01-2020 ರಂದು ಅಪಘಾತಕ್ಕೊಳಪಟ್ಟ ಕೆ ಎಸ್ ಆರ್ ಟಿ ಸಿ ಬಸ್ ಅನ್ನು ಚಾಸಾ 11 ರವರಿಂದ 100 ರೂಪಾಯಿ ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ. ಸದರಿ ಬಾಂಡ್ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ 17 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 17 ಎ ಎಂದು** ಗುರುತಿಸಲಾಯಿತು.

ದಿನಾಂಕ 23-05-2020 ರಂದು ಈ ಪ್ರಕರಣದಲ್ಲಿ ಮೃತ ಮಂಜುಹಾಥ ಮತ್ತು ಶಿವಾಜಿ ರವರ ಮರಣೋತ್ತರ ಪರೀಕ್ಷೆ ವರದಿ ಬಂದಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು **ನಿಪಿ 18 ಮತ್ತು 19 ಎಂದು,** ಸಾಕ್ಷಿಯ ಸಹಿಗಳನ್ನು **ನಿಪಿ 18 ಎ ಮತ್ತು 19 ಎ** ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ 12 ರವರಿಂದ ಐ ಎಮ್ ವಿ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ 20 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 20 ಎ ಎಂದು** ಗುರುತಿಸಲಾಯಿತು.

ದಿನಾಂಕ 25-05-2020 ರಂದು ಈ ಪ್ರಕರಣದಲ್ಲಿ ಅಪಘಾತದಲ್ಲಿ ಭಾಗಿಯಾದ ಮೋಟಾರ ಸೈಕಲ್ ಗೆ ಇನ್ಸೂರನ್ಸ್ ಇಲ್ಲದೆ ಮತ್ತು ವಾಹನ ಸವಾರನಿಗೆ ಡಿ ಎಲ್ ಇಲ್ಲದ ಕಾರಣ ಮಾನ್ಯ ನ್ಯಾಯಾಲಯಕ್ಕೆ ಪಿ ಎಫ್ ಹಾಕಿ ನಿವೇದಿಸಿಕೊಂಡಿರುತ್ತೇನೆ.

ಅಪಘಾತದ ಕುರಿತು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಧಾರಗಳು ಕಂಡು ಬಂದಿದ್ದರಿಂದ ತನಿಖೆ ಪೂರೈಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ.

ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈಗ ನ್ಯಾಯಾಲಯದ ಮುಂದೆ ಇರುತ್ತಾರೆ. ಅಪಘಾತಕ್ಕೋಳಪಟ್ಟ ವಾಹನವನ್ನು ನೋಡಿದರೆ ಗುರುತಿಸುತ್ತೇನೆ, ಸಾಕ್ಷಿ ನಿಪಿ 1

ರಲ್ಲಿರುವ ವಾಹನಗಳನ್ನು ಗುರುತಿಸಿರುತ್ತಾರೆ. ಚಾಸಾ 16 ರವರು ಈಗ ಮರಣ ಹೊಂದಿರುತ್ತಾರೆ. ಅವರು ನಮ್ಮ ಜೊತೆ 1 ವರ್ಷ ಸೇವೆ ಸಲ್ಲಿಸಿದ್ದಾರೆ. ಅವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ 9 ಅನ್ನು ತೋರಿಸಲಾಗಿ ಅದರಲ್ಲಿರುವ ಚಾಸಾ 16 ರವರ ಸಹಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು:** ಶ್ರೀ ಆರೋಪಿತರ ಪರ ಶ್ರೀ ಎಸ್ ವಾಯ್ ಜಿ ವಕೀಲರಿಂದ.

ಅಪಘಾತದ ಕುರಿತು ಮಾಹಿತಿ ಆ ದಿನ ಮಧ್ಯಾಹ್ನ 01-45 ಕ್ಕೆ ಬಂದಿತ್ತು. ಅಪಘಾತ 12-00 ಗಂಟೆಗೆ ಆಗಿತ್ತು. ನಾನು ಜಾಗಕ್ಕೆ 02-00 ಗಂಟೆಗೆ ಹೋದೆ. ನೀವು ಜಾಗಕ್ಕೆ ಹೋಗುವವರೆಗೆ ಮೃತ ದೇಹಗಳು ಮತ್ತು ವಾಹನಗಳು ಜಾಗದಲ್ಲಿಯೇ ಇದ್ದವು. ಮೊದಲೇ ಪೊಲೀಸರು ಜಾಗಕ್ಕೆ ಹೋಗಿದ್ದರು. ಘಟನಾ ಜಾಗ ಹಳಿಯಾಳದಿಂದ ದಾಂಡೇಲಿ ಹೋಗುವಾಗ ಇಳಿಜಾರಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಇಳಿಜಾರು ಇದ್ದರು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಯಾವುದೇ ಜಾಗಕ್ಕೆ ಹೋದಾಗ ಪಿರ್ಯಾದುದಾರರು ತೋರಿಸಿದ ಜಾಗವನ್ನು ಪರಿಶೀಲನೆ ಮಾಡಿ ಭಾವಚಿತ್ರವನ್ನು ತೆಗೆಯುತ್ತೀರಿ ಎಂದರೆ ಸರಿ. ನಿಪಿ 1 ಘಟನಾ ಜಾಗದ ಪಂಚನಾಮೆಯ ಸಮಯದಲ್ಲಿ ತೆಗೆದ ಭಾವಚಿತ್ರ ಎಂದರೆ ಸರಿ. ನಿಪಿ 1 ರಲ್ಲಿ ಚಾಸಾ 1 ರವರು ಕಾಣಿಸುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಪಿ 1 ಅನ್ನು ಘಟನಾ ಜಾಗಕ್ಕೆ ಹೋದ ಕೂಡಲೆ ತೆಗೆದಿರುತ್ತೇವೆ. ಪಂಚನಾಮೆಯ ಸಮಯದಲ್ಲಿ ಬೇರೆ ಭಾವಚಿತ್ರಗಳನ್ನು ತೆಗೆದಿರುತ್ತೇವೆ. ಈ ಪ್ರಕರಣದಲ್ಲಿ ಪಂಚನಾಮೆಯ ಸಮಯದಲ್ಲಿ ತೆಗೆದ ಭಾವಚಿತ್ರಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಘಟನಾ ಜಾಗದ ಪಂಚನಾಮೆಯನ್ನು ಸಂಜೆ 05-00 ರಿಂದ 06-00 ರ ವರೆಗೆ ಮಾಡಿರುತ್ತೇನೆ. ಶವ ಪಂಚನಾಮೆಯನ್ನು 02-15 ರಿಂದ 03-45 ರ ವರೆಗೆ ಮಾಡಿರುತ್ತೇನೆ. ಮಂಜುನಾಥ ಮಿರಾಶಿ ರವರ ಪಿ ಎಮ್ ವರದಿ ಪ್ರಕಾರ 04-10 ರಿಂದ 05-30 ರ ವರೆಗೆ ಜರುಗಿಸಲಾಯಿತು ಎಂದರೆ ಸಾಕ್ಷಿ ವೈದ್ಯರು ಸಮಯವನ್ನು ಆ ರೀತಿ ಬರೆದುಕೊಂಡಿದ್ದೀರಾ ಎಂದರೆ ಎನ್ನುತ್ತಾರೆ. ಪಿ ಎಮ್ ವರದಿ ಮತ್ತುಶವ ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿ ಅನುಕೂಲವಾಗುವಂತೆ ಸಮಯವನ್ನು ಬರೆದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಠಾಣೆಯಲ್ಲಿ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ಚಾಸಾ 6 ರಿಂದ 10 ರವರ ಹೇಳಿಕೆಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಪಡೆದಿರುತ್ತೀರಿ ಎಂದರೆ ಸರಿಯಲ್ಲ. ಪ್ರಕರಣದ ದಾಖಲೆಗಳನ್ನು ಮೃತರ ಕುಟುಂಬಕ್ಕೆ ಅನುಕೂಲವಾಗುವಂತೆ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ಮೋಟಾರ ಸೈಕಲ್

ಚಾಲಕನಿಗೆ ಡಿ ಎಲ್ ಇಲ್ಲದಿದ್ದರೂ ಸಹ ಅವರಿಗೆ ಪರಿಹಾರ ಸಿಗಬೇಕೆಂದು ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯ ತಪ್ಪು ಇಲ್ಲದಿದ್ದರೂ ಸಹ ಮೃತರ ಕುಟುಂಬಕ್ಕೆ ಅನುಕೂಲವಾಗುವಂತೆ ಸುಳ್ಳು ದೋಷಾರೋಪಣಾ ಪತ್ರವನ್ನು ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ. ಹಳಿಯಾಳ